466(749) ಶ್ರೀ ಎಸ್.ರಾಜೇಂದ್ರನ್(ಕೆ.ಜಿ.ಎಫ್) ಮಾನ್ಯ ಬೃಹತ್, ಮಾಧ್ಯಮ ಮತ್ತು ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ.ಜಿ.ಎಫ್ ನಲ್ಲಿ ಜನತೆಯ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಕೈಗಾರಿಕೆಗಳನ್ನು ತೆರೆಯಲಾಗುವುದೆಂದು ಈ ಹಿಂದೆ ಮಾನ್ಯ ಮಂತ್ರಿಗಳು ಅಶ್ವಾಸನೆ ನೀಡಿದ್ದು ಸರ್ಕಾರಕ್ಕೆ ಗೂತ್ತಿದೆಯೇ;

ಆ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ. ಆರ್. ಸಿಂಧ್ಯ(ಬೃಹತ್, ಮಾಧ್ಯಮ ಮತ್ತು ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು) :

ಅ) ಹೌದು

ಆ) ಸುಮಾರು 2600 ಎಕರೆಗಳಷ್ಟು ಖಾಲಿ ಭೂಮೀಯ ಕೆ.ಜಿ.ಎಫ್.ನಲ್ಲಿ ಲಭ್ಯವಿದ್ದು, ಅದನ್ನು ಕೈಗಾರಿಕಾ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ರಾಜ್ಯ ಮಟ್ಟದ ಏಕ ಗವಾಕ್ಷಿ ಏಜೆನ್ಸಿಯು ದಿನಾಂಕ:20.8.04 ರಂದು ನಡೆದ ಸಭೆಯಲ್ಲಿ ಮೆ:ವಿಐಆರ್ ಸ್ಪಾಂಜ್ ಮತ್ತು ಪವರ್ ಲಿಮಿಟೆಡ್, ಮುಂಬಯಿ ಇವರು ಸ್ಥಾಪಿಲು ಉದ್ದೇಶಿಸಿರುವ 1 ಎಲ್.ಎಮ್.ಟಿ.ಪಿ.ಎ ಸಾಮರ್ಥ್ಯದ ಸ್ಪಾಂಜ್ ಕಬ್ಬಿಣ ತಯಾರಿಕಾ ಘಟಕಕ್ಕೆ 200 ಎಕರೆಗಳಷ್ಟು ಭೂಮಿಯನ್ನು ನೀಡಲು ಮಾಡಲು ತಾತ್ವಿಕವಾಗಿ ಒಪ್ಪಿರುತ್ತದೆ. ಇದರಿಂದಾಗಿ ಸುಮಾರು 150 ಜನರಿಗೆ ಉದ್ಯೋಗ ಅವಕಾಶ ಲಭ್ಯವಾಗಲಿದ್ದು ಆಪ್ರದೇಶದಲ್ಲಿ ಅಂತಹ ಇನ್ನು ಹೆಚ್ಚಿನ ಘಟಕಗಳನ್ನು ಆ ಪ್ರದೇಶದಲ್ಲಿ ಸ್ಥಾಪಿಸುವ ಸಾಧ್ಯತೆ ಇರುತ್ತದೆ.

467(750) ಎನ್. ರಾಜೆಂದ್ರನ್ (ಕೆ.ಜಿ.ಎಷ್) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ವಿಧಾನ ಸಭೆಯ ಮೀಸಲು ಕ್ಷೇತ್ರಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಪ್ಯಾಕೆಜ್‌ಗಳನ್ನು ನೀಡಲು ಸರ್ಕಾರ ಮುಂದಾಗುವುದೇ;

ಆ) ಹಾಗಿದ್ದಲ್ಲಿ, ಇದನ್ನು ಎಂದಿನಿಂದ ಕಾರ್ಯರೂಪಕ್ಕೆ ತರಲಾಗುವುದು?

ಡಾ॥ ವೈ.ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಂತಹ ಪ್ರಸ್ತಾವನೆಗಳು ಯಾವವು ಸರ್ಕಾರದ ಮುಂದೆ ಇಲ್ಲ.

ಆ) ಉದ್ಭವಿಸುವುದಿಲ್ಲ.

468(23) ಶ್ರೀ ರವಿ ಸಿ.ಟಿ.(ಚಿಕ್ಕಮಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

1) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇ. 18ರ ಹಣವನ್ನು ವಿನಿಯೋಗಿಸುವಲ್ಲಿ ನಿರ್ದಿಷ್ಟ ಮಾರ್ಗ ಸೂಚಿಗಳಿವೆಯೇ? ಹಾಗಿದ್ದಲ್ಲಿ ವಿವರ ನೀಡುವುದು.

2) ಕಳೆದ 5 ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ ಈ ರೀತಿಯ ಶೇಕಡಾ 18ರ ಹಣವನ್ನು ಸರಿಯಾಗಿ ವಿನಿಯೋಗಿಸಿರುವುದಿಲ್ಲವೆಂಬುದು ನಿಜವೇ: ಹಾಗಿದ್ದಲ್ಲಿ, ಅವುಗಳು ಯಾವುವು: ವರ್ಷವಾರು ವಿವರ ನೀಡುವುದು.